# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-1294/2016/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 17/04/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರತರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಆರ್.ನಾರಾಯಣಸ್ವಾಮಿ, ನಿವೃತ್ತ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಎನ್.ವೆಂಕಟೇಶ್, ರಾಜ್ಯ ಮಟ್ಟದ ಸಂಘಟನಾ ಸಂಚಾಲಕರು, ದಲಿತ ಸಂಘ ಸಂಸ್ಥೆ, ಚಿಕ್ಕಬಳ್ಳಾಪುರ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಆರ್.ನಾರಾಯಣಸ್ವಾಮಿ, ನಿವೃತ್ತ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಚಿಂತಾಮಣಿ ನಗರ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ನಿವೃತ್ತ ಉಪನ್ಯಾಸಕರಾಗಿದ್ದು, ಹಳೆ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಂಘದ ಹೆಸರಿನಲ್ಲಿ ವಿದ್ಯಾರ್ಥಿಗಳಿಂದ ಅಕ್ರಮವಾಗಿ ಹಣ ವಸೂಲಿ ಮಾಡಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದೂರಿನ ಬಗ್ಗೆ ಮಾನ್ಯ ಪಿ.ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ, ಚಿಂತಾಮಣಿಯಲ್ಲಿ ಮೊ.ಸಂ.ಸಿ.ಸಿ 677/14 ದಿ.18/7/14 ರಂದು ವಿಚಾರಣೆ ನಡೆಯುತ್ತಿದೆ. ಇದರ ಅಂತಿಮ ತೀರ್ಪು ಪಡೆದ ಮೇಲೆ ವಿವರಗಳನ್ನು ತಲುಪಿಸಲಾಗುವುದೆಂದು ತಿಳಿಸಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ನ್ಯಾಯಾಲಯದಲ್ಲಿರುವ ಮೊ.ಸಂ.ಸಿ.ಸಿ.677/14 ಮತ್ತು ಅವರು ಸಲ್ಲಿಸಿರುವ ಪ್ರಕರಣಕ್ಕೆ ಯಾವುದೇ ಸಂಬಂಧವಿರುವುದಿಲ್ಲ. ಎದುರುದಾರರು ಅಕ್ರಮವಾಗಿ ರೂ.20,000/- ನಗದೀಕರಿಸಿಕೊಂಡಿರುವ ಬಗ್ಗೆ ಮೊಕದ್ದಮೆ ದಾಖಲಿಸಿದ್ದು, ದೂರುದಾರರು ನೀಡಿರುವ ದೂರು ಹಾಗೂ ಅವರು ನೀಡಿರುವ ಸಮಜಾಯಿಷಿಗೂ ಯಾವುದೇ ಸಂಬಂಧವಿರುವುದಿಲ್ಲ. ಸಂಘದ ಜಿಲ್ಲಾ ನೋಂದಣಾಧಿಕಾರಿಗಳು ಇವರ ಆದೇಶ ಸಂ.ಜಿನೋಜಿ/ಸಂಘ/136/1998-99 ದಿ.3/4/13 ರಲ್ಲಿ ಸಂಘವನ್ನು ರದ್ದುಗೊಳಿಸಿ ಆದೇಶಿಸಿರುತ್ತಾರೆ. ಜಿಲ್ಲಾ ನೋಂದಣಾಧಿಕಾರಿಗಳು ಅವರ ಆದೇಶದಲ್ಲಿ ಎದುರುದಾರರು

ಅಧ್ಯಕ್ಷರಾದಂತಹ 2006-13 ರ ತನಕ ಸತತವಾಗಿ ಸಹಕಾರ ಸಂಘಗಳ ನಿಯಮ ನಿಬಂಧನೆಗಳ ಪ್ರಕಾರ ನಡೆಸದೇ ಇದ್ದುದರಿಂದ ಸಂಘವನ್ನು ವಿಸರ್ಜಿಸಿ ಪ್ರಾಚಾರ್ಯರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಅವರ ಸುಪರ್ದಿಗೆ ನೀಡಲು ಆದೇಶಿಸಿದರೂ ಸಹ ಈವರೆಗೂ ಹಸ್ತಾಂತರಿಸಿರುವುದಿಲ್ಲವೆಂದು ಹೇಳಿರುತ್ತಾರೆ.

5) ದೂರುದಾರರ ಪ್ರತ್ಯುತ್ತರವನ್ನು ಪರಿಶೀಲಿಸಿದಾಗ, ಅಲ್ಯುಮಿನಿ ಅಸೋಸಿಯೇಷನ್ ಆಫ್ ಗೌರ್ನಮೆಂಟ್ ಪಾಲಿಟೆಕ್ನಿಕ್, ಚಿಂತಾಮಣಿ ಸಂಘವು ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿರುವುದರಿಂದ ಸದರಿ ಸಂಘವನ್ನು ರದ್ದುಮಾಡಿದ್ದು ಕಂಡುಬರುತ್ತದೆ. ಸಂಘವನ್ನು ವಿಸರ್ಜಿಸಿ ಆಡಳಿತಾಧಿಕಾರಿಯನ್ನು ನೇಮಿಸಿರುವುದಾಗಿ ದೂರುದಾರರು ತಿಳಿಸಿದ್ದು, ಆದರೆ ಸದರಿ ಸಂಘದ ಲೆಕ್ಕ ಪರಿಶೋಧನಾ ವರದಿಯನ್ನು ಮಾಡಿಸಲಾಗಿರುತ್ತದೆಯೋ, ಇಲ್ಲವೋ ಎಂಬ ಬಗ್ಗೆ ಮಾಹಿತಿಗಳು ಕಂಡುಬರುತ್ತಿಲ್ಲ ಮತ್ತು ಯಾರನ್ನು ಅಡಳಿತಾಧಿಕಾರಿಯಾಗಿ ನೇಮಿಸಲಾಗಿದೆ ಎನ್ನುವ ಬಗ್ಗೆ ಕೂಡ ಸೂಕ್ತ ಮಾಹಿತಿಯಿಲ್ಲದ್ದರಿಂದ, ಸದರಿ ಸಂಘದ ಲೆಕ್ಕ ಪರಿಶೋಧನೆ ಮಾಡಿಸಿದ ಬಗ್ಗೆ ಮತ್ತು ಹಣ ದುರುಪಯೋಗವಾಗಿರುವ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೆ ಆದೇಶಿಸಲಾಗಿತ್ತು

6) ಸಹಕಾರ ಸಂಘಗಳ ಉಪ ನಿಬಂಧಕರು, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ವರದಿಯನ್ನು ಸಲ್ಲಿಸಿರುತ್ತಾರೆ.

   i. ಅಲ್ಯುಮಿನಿ ಅಸೋಸಿಯೇಷನ್ ಆ ಗೌರ್ನಮೆಂಟ್ ಪಾಲಿಟೆಕ್ನಿಕ್, ಚಿಂತಾಮಣಿ ಈ ಸಂಘದ ಹೆಸರಿನಲ್ಲಿ ಶ್ರೀ.ಆರ್.ನಾರಾಯಣಸ್ವಾಮಿರವರು ಅಕ್ರಮವಾಗಿ ಕಾಲೇಜಿನ ಹಳೆ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡುತ್ತಿರುವುದಾಗಿ ಎ.ಬಿ.ವಿ.ಪಿ (ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್) ಚಿಂತಾಮಣಿ ಶಾಖೆಯಿಂದ ಮನವಿಯನ್ನು ತಹಶೀಲ್ದಾರ್ ಮೂಲಕ ಉಪ ವಿಭಾಗಾಧಿಕಾರಿಗಳಿಗೆ ಮನವಿ ನೀಡಿದ್ದು, ಈ ಬಗ್ಗೆ ತಹಶೀಲ್ದಾರ್‌ರವರು ಆರಕ್ಷಕ ನಿರೀಕ್ಷಕರು, ಚಿಂತಾಮಣಿ ಇವರನ್ನು ತನಿಖೆ ನಡೆಸಿ ವರದಿ ಸಲ್ಲಿಸಲು ಕೋರಿದ್ದು, ಮನವಿಯಲ್ಲಿರುವ ಅಂಶಗಲ ಬಗ್ಗೆ ತನಿಖೆ ನಡೆಸಿ ಆರೋಪವು ಸಾಬೀತಾಗಿರುವುದಾಗಿ ಆರಕ್ಷಕ ನಿರೀಕ್ಷಕರು ವರದಿ ನೀಡಿದ್ದು, ಈ ಆಧಾರದ ಮೇಲೆ ಸಂಘಗಳ ನೋಂದಣಾಧಿಕಾರಿಗಳು ವಿಚಾರಣೆ ನಡೆಸಿ ಅಲ್ಯುಮಿನಿ ಅಸೋಸಿಯೇಷನ್ ಆ ಗೌರ್ನಮೆಂಟ್ ಪಾಲಿಟೆಕ್ನಿಕ್, ಚಿಂತಾಮಣಿ, ಸಂಘವು ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿರುವುದಲ್ಲದೆ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 11, 12, 13, ಹಾಗೂ ಕರ್ನಾಟಕ ಸಂಘಗಳ ನೋಂದಣಿ ನಿಯಮಗಳ ನಿಯಮ 5 ಮತ್ತು 7 ನ್ನು ಉಲ್ಲಂಘಿಸಿರುವುದರಿಂದ ಹಾಗೂ ಸಂಘವು 13 ವರ್ಷಗಳಿಂದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಲ್ಲಿಸದೆ ಇದ್ದ ಕಾರಣಗಳಿಂದ ಸಂಘಗಳ ನೋಂದಣಾಧಿಕಾರಿಗಳು ಹಾಗೂ ಜಿಲ್ಲಾ ನೋಂದಣಾಧಿಕಾರಿ, ಚಿಕ್ಕಬಳ್ಳಾಪುರ ಇವರ ಆದೇಶದಲ್ಲಿ ಸಂಘದ ನೋಂದಣಿಯನ್ನು ರದ್ದುಪಡಿಸಿ, ಸಂಘದ ವಿಸರ್ಜನೆಗೆ ಆದೇಶಿಸಿರುತ್ತಾರೆ ಹಾಗೂ ಅನಧಿಕೃತವಾಗಿ ಸಂಗ್ರಹವಾದ ಹಣವನ್ನು ಮತ್ತು ಆಸ್ತಿಯ ವಿಲೇವಾರಿಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುತ್ತದೆ.

   ii. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರು ಜಿಲ್ಲಾ ನೋಂದಣಾಧಿಕಾರಿಯವರಿಗೆ ಪತ್ರ ಬರೆದು ಸಂಘವನ್ನು ರದ್ದುಪಡಿಸಿದ ನಂತರವೂ ಶ್ರೀ.ನಾರಾಯಣಸ್ವಾಮಿ ರವರು ಸ್ಟೇಟ್ ಬ್ಯಾಂಕ್

ಆಫ್ ಮೈಸೂರು, ಚಿಂತಾಮಣಿ ಶಾಖೆಯಲ್ಲಿ ನಿಯಮ ಬಾಹಿರವಾಗಿ ಹಣವನ್ನು ಡ್ರಾ ಮಾಡಿರುವುದರಿಂದ, ಇವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಹಾಗೂ ಅಲ್ಯುಮಿನಿ ಅಸೋಸಿಯೇಷನ್ ಆ ಗೌರ್‍ನಮೆಂಟ್ ಪಾಲಿಟೆಕ್ನಿಕ್, ಚಿಂತಾಮಣಿ ಇದರ ವಶದಲ್ಲಿರುವ ಕಟ್ಟಡವನ್ನು ಹಾಗೂ ಖಾತೆಯಲ್ಲಿರುವ ಹಣವನ್ನು ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಪ್ರಿನ್ಸಿಪಾಲರ ಸುಪರ್ದಿಗೆ ವಹಿಸಿಕೊಡಲು ಸೂಚಿಸಿರುತ್ತಾರೆ.

iii. ಈಲ್ಲಾ ನೋಮದಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರು ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇವರಿಗೆ ಪತ್ರ ಬರೆದು, ಸಂಘದ ಹೆಸರಿನಲ್ಲಿರುವ ಕಟ್ಟಡ ಹಾಗೂ ಖಾತೆಯಲ್ಲಿರುವ ಹಣವನ್ನು ತಮ್ಮ ಸುಪರ್ದಿಗೆ ಆಡಳಿತಾಧಿಕಾರಿಯಂತೆ ವಹಿಸಿಕೊಂಡು, ವಶಕ್ಕೆ ತೆಗೆದುಕೊಂಡ ನಂತರ ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇವರು ದಿ.18/11/2014 ರಂದು ಜಿಲ್ಲಾ ನೋಂದಣಾಧಿಕಾರಿಯವರಿಗೆ ಪತ್ರ ಬರೆದು ಸಂಘದ ಕಟ್ಟಡ ಹಾಗೂ ಖಾತೆಯನ್ನು ಅವರ ಸುಪರ್ದಿಗೆ ವಹಿಸಿಕೊಳ್ಳಲಾಗಿದೆಯೆಂದು ತಿಳಿಸಿರುತ್ತಾರೆ.

iv. ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇವರು ಜಿಲ್ಲಾ ಪೋಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಪತ್ರ ಬರೆದು ಶ್ರೀ.ನಾರಾಯಣಸ್ವಾಮಿ ಇವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ನಿಂದ ಹಣ ಡ್ರಾ ಮಾಡಿ ದುರುಪಯೋಗ ಪಡಿಸಿಕೊಂಡಿರುವುದರಿಂದ, ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರು ಕ್ರಿಮಿನಲ್ ಕೇಸ್ ದಾಖಲಿಸುವಂತೆ ನಿರ್ದೇಶನ ನೀಡಿದ ಮೇರೆಗೆ ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಂತಾಮಣಿ ಇಲ್ಲಿ ಮೊಕದ್ದಮೆ ಸಂ.ಸಿ.ಸಿ.677/14 ರಂತೆ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿ ವಿಚಾರಣೆ ನಡೆದಯುತ್ತಿರುವುದಾಗಿ ತಿಳಿಸಿರುತ್ತಾರೆ ಹಾಗೂ ಸಂಘಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಸ್ತಾಂತರಿಸದೆ ಅಕ್ರಮವಾಗಿ ತಡೆಹಿಡಿದಿರುವ ಕಾರಣ ಅವರನ್ನು ಅಮಾನತ್ತು ಪಡಿಸಬೇಕೆಂದು ಕೋರಿರುತ್ತಾರೆ.

v. ಜಿಲ್ಲಾ ನೋಂದಣಾಧಿಕಾರಿಗಳು ಶ್ರೀ.ಆರ್.ನಾರಾಯಣಸ್ವಾಮಿ, ನಿವೃತ್ತ ಉಪನ್ಯಾಸಕರು, ಇವರಿಗೆ ಪತ್ರ ಬರೆದು ನೋಂದಣಿ ರದ್ದತಿ ಪತ್ರದ ಅಂಶಗಳನ್ನು ಪಾಲಿಸಲು ಸೂಚಿಸಿರುತ್ತಾರೆ.

vi. ವಸ್ತು ವಿಷಯವು ಕಚೇರಿಯ ಗಮನಕ್ಕೆ ಬಂದ ನಂತರ ಶ್ರೀ.ಆರ್.ನಾರಾಯಣಸ್ವಾಮಿರವರಿಗೆ ನೋಟೀಸು ಜಾರಿ ಮಾಡಿ ದಿ.16/1/2017 ರೊಳಗಾಗಿ ದಾಖಲೆಗಳನ್ನು ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇವರಿಗೆ ವಹಿಸಿಕೊಡಲು ಸೂಚಿಸಿದೆ. ತಪ್ಪಿದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ಜರುಗಿಸಲಾಗುವುದೆಂದು ಸಹ ತಿಳಿಸಲಾಗಿದೆಯೆಂದು ವರದಿಯಲ್ಲಿ ಹೇಳಿರುತ್ತಾರೆ.

7) ಸಹಕಾರ ಸಂಘಗಳ ಉಪ ನಿಬಂಧಕರು, ಚಿಕ್ಕಬಳ್ಳಾಪುರ ಇವರು ವರದಿಯ ಜೊತೆ ಹಾಜರು ಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ದಿ.3/4/2013 ರಂದು ಸಂಘಗಳ ನೋಂದಣಾಧಿಕಾರಿಗಳು ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಆದೇಶವನ್ನು ಮಾಡಿ ಅಲ್ಯುಮಿನಿ ಅಸೋಸಿಯೇಷನ್ ಆಫ್ ಗೌರ್‍ನಮೆಂಟ್ ಪಾಲಿಟೆಕ್ನಿಕ್ ಸಂಘದ ನೋಂದಣಿಯನ್ನು ರದ್ದುಪಡಿಸಿ ಸಂಘದ ವಿಸರ್ಜನೆಗೆ ಆದೇಶಿಸಿರುವುದು ಹಾಗೂ ಅನಧಿಕೃತವಾಗಿ ಸಂಗ್ರಹವಾಗಿರುವ ಹಣ ಹಾಗೂ ಆಸ್ತಿಯ ವಿಲೇವಾರಿಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆಯೆಂದು ತಿಳಿಸಿರುವುದು ಕಂಡುಬರುತ್ತದೆ. ಅದೇರೀತಿ, ದಿ.9/1/2014 ರಂದು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಾರಾಯಣಸ್ವಾಮಿಯವರ ವಿರುದ್ಧ

ಕ್ರಿಮಿನಲ್ ಪ್ರಕರಣವನ್ನು ದಾಖಲಿಸಬೇಕೆಂದು ಕೋರಿ ಜಿಲ್ಲಾ ನೋಂದಣಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ನೀಡಿರುವ ಕೋರಿಕೆಯ ಪತ್ರವನ್ನು ಸಹ ಹಾಜರು ಪಡಿಸಿರುತ್ತಾರೆ. ದಿ.18/11/14 ರಂದು ಸಂಘದ ಹೆಸರಿನಲ್ಲಿರುವ ಕಟ್ಟಡ ಹಾಗೂ ಖಾತೆಯ ಹಣವನ್ನು ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ ಚಿಂತಾಮಣಿ ಇವರು ಸುಪರ್ದಿಗೆ ವಹಿಸಿಕೊಂಡು ಜಿಲ್ಲಾ ನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೆ ವರದಿಯನ್ನು ನೀಡಿರುವುದು ಕಂಡುಬರುತ್ತದೆ. ಅದೇರೀತಿ ದಿ.19/10/2015 ರಂದು ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ ಚಿಂತಾಮಣಿ ಇವರು ಆರ್.ನಾರಾಯಣಸ್ವಾಮಿ ಇವರ ವಿರುದ್ಧ ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ದೂರನ್ನು ನೀಡಿರುವುದು ಕಂಡುಬರುತ್ತದೆ.

8) ಸಹಕಾರ ಸಂಘಗಳ ಉಪ ನಿಬಂಧಕರ ವರದಿಯನ್ನು ಪರಿಶೀಲಿಸಿದಾಗ, ಜೆ.ಎಂ.ಎಫ್.ಸಿ.ನ್ಯಾಯಾಲಯ ಇಲ್ಲಿ ಸಿ.ಸಿ.677/14 ರಂತೆ ಎದುರುದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿ ವಿಚಾರಣೆ ನಡೆಯುತ್ತಿರುವುದಾಗಿ ತಿಳಿಸಿರುತ್ತಾರೆ. ಜಿಲ್ಲಾ ನ್ಯಾಯಾಲಯಗಳ ವೆಬ್‌ಸೈಟನ್ನು ಪರಿಶೀಲಿಸಿದಾಗ, ಆರ್.ನಾರಾಯಣಸ್ವಾಮಿ ಎನ್ನುವವರ ವಿರುದ್ಧ ಚಿಂತಾಮಣಿ ನಗರ ಪೊಲೀಸ್ ಠಾಣೆಯವರು ಐ.ಪಿ.ಸಿ. ಕಲಂ 406 ಮತ್ತು 420 ರನ್ವಯ ಅಂತಿಮ ವರದಿಯನ್ನು ಸಲ್ಲಿಸಿ ಸಿ.ಸಿ.677/14 ರಂತೆ ಪ್ರಧಾನ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ, ಚಿಂತಾಮಣಿಯಲ್ಲಿ ಪ್ರಕರಣವು ವಿಚಾರಣೆಗೆ ಬಾಕಿಯಿರುವುದು ಕಂಡುಬರುತ್ತದೆ.

9) ಎದುರುದಾರರ ವಿರುದ್ಧ ಈಗಾಗಲೇ ಕ್ರಿಮಿನಲ್ ಪ್ರಕರಣವು ದಾಖಲಾಗಿ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿಯಿರುವುದರಿಂದ, ಎದುರುದಾರರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ ಡ್ರಾ ಮಾಡಿ ದುರುಪಯೋಗ ಪಡಿಸಿಕೊಂಡಿರುವ ಹಣವನ್ನು ವಸೂಲಿ ಮಾಡುವುದು ಅಗತ್ಯವಿರುತ್ತದೆ.

10) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಎದುರುದಾರರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ ಡ್ರಾ ಮಾಡಿ ದುರುಪಯೋಗ ಪಡಿಸಿಕೊಂಡಿರುವ ಹಣವನ್ನು ವಸೂಲಾತಿ ಮಾಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 3/4/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**